# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(CIN) : U40109KA2004SGC035177
ನಿಗಮ ಕಛೇರಿ : ನಂ 29, ವಿಜಯನಗರ
2 ನೇ ಹಂತ ಹಿನಕಲ್
ಮೈಸೂರು-570017
www.cescmysore.org

ರವರ ಕಛೇರಿ
ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ,
ಸೆಸ್ಕ್ ಆಲೂರು.
ದೂ.ಸಂ. 081702-218233
E.Mail : aeealur@gmail.com

ಕ್ರಮಾಂಕ : ಸ.ಕಾ.ಇ(ವಿ)/ಸ.ಇಂ(ತಾಂ)/ಆಲೂರು/2017-18/ 1720 - 22 ದಿನಾಂಕ : 03.03.18

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ: 21.02.2018 ರ ಬುಧವಾರ ದಂದು ಶ್ರೀಮತಿ ಭಾರತಿ,ಅಧೀಕ್ಷಕ ಇಂಜಿನಿಯರ್ (ವಿ) (ಪ್ರಭಾರಿ) ಹಾಸನ ರವರ ಅಧ್ಯಕ್ಷತೆಯಲ್ಲಿ ಆಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು:

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಶ್ರೀ ರಂಗೇಗೌಡ ಎಮ್.ಬಿ. ಸ.ಕಾ.ಇಂ.(ವಿ). ಆಲೂರು ಉಪವಿಭಾಗ
2. ಶ್ರೀ ಹರೀಶ್,ಲೆಕ್ಕಾಧಿಕಾರಿ,ಸಕಲೇಶಪುರ ವಿಭಾಗ
3. ಶ್ರೀ ತೋಟಪ್ಪ,ಲೆಕ್ಕಾಧಿಕಾರಿ (ಆಂ.ಪ),ಸಕಲೇಶಪುರ ವಿಭಾಗ
4. ಶ್ರೀ ಮತಿ ಬಿಂದು,ಸಹಾಯಕ ಇಂಜಿನಿಯರ್ (ತಾಂತ್ರಿಕ,). ಆಲೂರು ಉಪವಿಭಾಗ
5. ಚಂದ್ರಶೇಖರ್ ಕಿರಿಯ ಇಂಜಿನಿಯರ್ (ವಿ). ಆಲೂರು ಶಾಖೆ
6. ಶ್ರೀ ಅಬ್ದುಲ್. ಕಿರಿಯ ಇಂಜಿನಿಯರ್ (ವಿ). ಪಾಳ್ಯ ಶಾಖೆ.
7. ಶ್ರೀ ಮಹೇಶ್ವರಪ್ಪ, ಕಿರಿಯ ಇಂಜಿನಿಯರ್ (ವಿ). ಮಗ್ಗೆ ಶಾಖೆ.
8. ಶ್ರೀ ರಂಗೇಗೌಡ, ಹಿರಿಯ ಸಹಾಯಕರು. ಕಂದಾಯ ಶಾಖೆ,ಆಲೂರು

ಶ್ರೀ ಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರುಗಳನ್ನು,ಸ್ವಾಗತಿಸುವ ಮೂಲಕ ಸಭೆಯನ್ನು, ಬೆಳಿಗ್ಗೆ 11:00 ಗಂಟೆಗೆ ಪ್ರಾರಂಭ ಮಾಡಿದರು.

---

### ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1. ಶ್ರೀ ಕಾಂತರಾಜು ಬಿನ್ ಲಕ್ಷ್ಮಣರಾಜು ಅರಸ್ ಉಮಾದೇವರಹಳ್ಳಿ ಇವರ ಮನೆಗೆ ಐ.ಪಿ ಫೀಡರ್ ಮೇಲೆ ವಿದ್ಯುತ್ ಸರಬರಾಜು ಆಗುತ್ತಿದ್ದು ಅದನ್ನು ನಿರಂತರ ಜ್ಯೋತಿಯ ಮೇಲೆ ಬದಲಾವಣೆ ಮಾಡಿಕೊಡಬೇಕಾಗಿ ಕೇಳಿಕೊಂಡರು.
   - ಸಭೆಯ ಅಧ್ಯಕ್ಷರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಗ್ರಾಹಕರು ಸ್ವಂತ ಕಾಮಗಾರಿಯಡಿ ಕಂಬಗಳನ್ನು ಅಳವಡಿಸಿಕೊಂಡು ನಿರಂತರ ಜ್ಯೋತಿಯ ಮೇಲೆ ವಿದ್ಯುತ್ ಸರಬರಾಜು ಪಡೆಯಲು ತಿಳಿಸಿದರು.
2. ಶ್ರೀ ರವಿ ಬಿನ್ ರಾಜಕುಮಾರ್ ಉಮಾದೇವರಹಳ್ಳಿ ಇವರು ಪರಿವರ್ತಕಗಳ ಮೇಲೆ ಹೆಚ್ಚುವರಿ ಪಂಪ್ ಸೆಟ್ ಗಳಿದ್ದು ಆಗಾಗ ಪರಿವರ್ತಕಗಳು ಹೆಚ್ಚುವರಿ ಹೊರೆಯಿಂದ ಸುಟ್ಟು ಹೋಗುತ್ತಿರುವ ಬಗ್ಗೆ ತಿಳಿಸಿ ಹೆಚ್ಚುವರಿಯಾಗಿ ಪರಿವರ್ತಕ ಅಳವಡಿಸಲು ಕೋರಿದರು.

Scanned by CamScanner

- ಸಭೆಯ ಅಧ್ಯಕ್ಷರು ಶಾಖಾಧಿಕಾರಿ ಆಲೂರುರವರಿಗೆ UNIP ಯೋಜನೆಯಡಿ ಅಧಿಕ ಒತ್ತಡವಿರುವ ಪರಿವರ್ತಕಗಳಿಗೆ ಹೆಚ್ಚುವರಿಯಾಗಿ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿಯನ್ನು ಸಲ್ಲಿಸಲು ತಿಳಿಸಿದರು.

3. ಶ್ರೀ ಪರಮೇಶ್ವರಪ್ಪ ಬಿನ್ ಚೊನ್ನಾಚಪ್ಪ ಬಿಕ್ಕರಣಗಾಲ್ ರವರು ನಿರಂತರ ಜ್ಯೋತಿ ವಿದ್ಯುತ್ ಆಲೂರು ತಾಲ್ಲೂಕಿನಲ್ಲಿ ಇದ್ದರು ಸ್ವಲ್ಪ ಮಳೆ ಬಿದ್ದರು ವಿದ್ಯುತ್ ಇರುವುದಿಲ್ಲ ಎಂದು ತಿಳಿಸಿದರು. ಆಲೂರು ತಾಲ್ಲೂಕು ಮುಖ್ಯ ಸ್ಥಳವಾಗಿದ್ದು ಇಲ್ಲಿ MUSS ಯಾಕೆ ಇಲ್ಲ ಎಂದು ಕೇಳಿದರು.ಅಭಿವೃದ್ಧಿ ಶುಲ್ಕವನ್ನು ಯಾಕೆ ಪಡೆಯುತ್ತಿರಾ ಹಾಗೂ ರೈತರು ಕೊಳವೆಬಾವಿ ಕೊರೆಸಲು ಲಕ್ಷಂತರ ರೂ ಖರ್ಚು ಮಾಡಿದ್ದು ಸರ್ವೀಸ್ ಪಡೆಯಲು 10,000/- ಯಾಕೆ ಪಡೆಯುತ್ತಿರಾ ಎಂದು ಕೇಳಿದರು.
   - ಸಭೆಯ ಅಧ್ಯಕ್ಷರು ಶಾಖಾಧಿಕಾರಿಗಳಿಗೆ ನಿರಂತರ ಜ್ಯೋತಿ ಫೀಡರ್ ಗಳ ನಿರ್ವಹಣೆಯನ್ನು ಕಾಲ ಕಾಲಕ್ಕೆ ಸಮರ್ಪಕವಾಗಿ ಮಾಡಲು ತಿಳಿಸಿದರು. ಆಲೂರಿನಲ್ಲಿ MUSS ನಿರ್ಮಾಣ ಮಾಡಲು ಸ್ಥಳ ದೊರೆಯದೆ ಇರುವ ಬಗ್ಗೆ ತಿಳಿಸಿದರು. ಅಭಿವೃದ್ಧಿ ಶುಲ್ಕವನ್ನು KERC ನಿಯಾಮನುಸಾರ ಪಡೆಯುತ್ತಿರುವುದಾಗಿ ತಿಳಿಸಿದರು.

4. ಶ್ರೀ ಶಾಂತಪ್ಪ ಬಿನ್ ಕೃಷ್ಣೇಗೌಡ ಕಾಡ್ಲೂರು ಕೊಪ್ಪಲು ರವರು ಮಾಪಕ ನಂ:-ALM-19832 ಮಾಪಕ ಹಾಳಾಗಿದ್ದು ಬದಲಿ ಮಾಪಕ ಅಳವಡಿಸಲು ಕೋರಿದರು.
   - ಸಭೆಯ ಅಧ್ಯಕ್ಷರು ಶಾಖಾಧಿಕಾರಿಗಳಿಗೆ ಮಾಪಕ ಬದಲಾವಣೆಯನ್ನು ನಿಯಾಮನುಸಾರ ಮಾಡಲು ಸೂಚಿಸಿದರು.

5. ಹೆಚ್.ಆರ್.ಮಲ್ಲೇಶಗೌಡ ಬಿನ್ ರಾಮೇಗೌಡ ಹಂಚೂರುರವರ ಸರ್ವೆ ನಂ:155/1,155/3 ರಲ್ಲಿ ಕೊಳವೆ ಬಾವಿ ಕೊರೆದಿದ್ದು ಸಕ್ರಮ ಶುಲ್ಕ ಪಾವತಿಸಿದ್ದು ವೋಲ್ಟೇಜ್ ಸಮರ್ಪಕವಾಗಿಲ್ಲ ಎಂದು ತಿಳಿಸಿದರು ಹರೀಶ ಮಾರ್ಗದಾಳು ಅವ್ಯವಹಾರ ಮಾಡಿರುತ್ತಾರೆ ತನಿಖೆ ನಡೆಸಿ ಎಂದು ದೂರು ನೀಡಿದರು
   - ಸಭೆಯ ಅಧ್ಯಕ್ಷರು ಹೆಚ್.ಆರ್.ಮಲ್ಲೇಶಗೌಡ ಬಿನ್ ರಾಮೇಗೌಡರವರಿಗೆ UNIP ಯೋಜನೆಯಡಿ ಅವಶ್ಯವಿದ್ದಲ್ಲಿ ಪರಿವರ್ತಕ ಅಳವಡಿಸುವಂತೆ ಶಾಖಾಧಿಕಾರಿ ಪಾಳ್ಯರವರಿಗೆ ಸೂಚಿಸಿದರು. ಹಾಗೂ ಮಾರ್ಗದಾಳು ಹರೀಶ್ ಕಾರ್ಯ ವೈಖರಿಯ ಬಗ್ಗೆ ವರದಿ ನೀಡುವಂತೆ ಸೂಚಿಸಿದರು.

ಸಭೆಯ ಅಧ್ಯಕ್ಷರು ಉಪವಿಭಾಗದ ಪ್ರಗತಿಯಲ್ಲಿರುವ IPDS, ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆ,ಗಂಗಾಕಲ್ಯಾಣ ಮತ್ತು ಇನ್ನಿತರ ಪ್ರಗತಿಯ ಬಗ್ಗೆ ಚರ್ಚಿಸಿದರು.

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರುಗಳನ್ನು,ವಂಧಿಸುವ ಮೂಲಕ ಸಭೆಯನ್ನು, ಮಧ್ಯಾಹ್ನ 2 :00 ಗಂಟೆಗೆ ಮುಕ್ತಾಯಗೊಳಿಸಲಾಯಿತು

3/3

ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ)
ಕಾ ಮತ್ತು ಪಾ ಉಪ-ವಿಭಾಗ,ಸೆಸ್ಕ್, ಆಲೂರು.

ಪ್ರತಿಗಳನ್ನು ಗೌರವಪೂರ್ವಕವಾಗಿ:

1..ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ,ಚಾ.ವಿ.ಸ.ನಿ.ನಿ., ಹಾಸನರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2.ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಲೆಕ್ಕಾಧಿಕಾರಿ (ಆಂ.ಪ),ಸಕಲೇಶಪುರ ವಿಭಾಗ
4. ಲೆಕ್ಕಾಧಿಕಾರಿ (ಆಂ.ಪ),ಸಕಲೇಶಪುರ ವಿಭಾಗ
5..ಕಛೇರಿ ಪ್ರತಿ.

Scanned by CamScanner